ಹಾವೇರಿ ಜಿಲ್ಲೆಯ ಸವಣೂರು ತಾಲ್ಲೂಕಿನ ಹಿರೇಮರಳಿಹಳ್ಳಿ ಗ್ರಾಮದವರಾದ ಲಿಂಗರಾಜ ಸೊಟ್ಟಪ್ಪನವರ, ವೃತ್ತಿಯಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರು. ಕಥೆ ಮತ್ತು ಕಾವ್ಯ ಎರಡರಲ್ಲೂ ಅವರಿಗೆ ಒಲವು. 'ಹರಿವ ನದಿಯೂ ಹಂಬಲದ ತಟವೂ' ಅವರ ಕವನ ಸಂಕಲನ. 'ಮಾರ್ಗಿ' ಕಥಾಸಂಕಲನ.

ಎರಡಿರಲಿ ಬ್ಯಾಡಗಿಯ ವಖಾರಕ್ಕೆ ಹೋಗುವ ರೈತರಿದ್ದರು.

ಟೆಂಡರ್ ಹಾಕಿದ ಹೊಟ್ಟೆ ಹರಿದುಕೊಂಡಂತೆ ಬಿದ್ದಿರುವ ತಮ್ಮ ತಮ್ಮ ಚೀಲದ ಸುತ್ತ ಬಿದ್ದಂತಹ ಮೆಣಸಿನಕಾಯಿಯನ್ನೇ ಆಯ್ದುಕೊಂಡು ಟವೆಲ್ಲಿಗೆ ತುಂಬಿಕೊಂಡು ಮಿಠಾಯಿಯವನಿಗೆ ಹಾಕಿ ಕೊಬ್ಬರಿವಡಾ, ಜಿಲೇಬಿ, ಮೈಸೂರ ಪಾಕು ತಿನ್ನುವುದು ರೈತರ ರೂಢಿ. ದುಬ್ಬೀರನೂ ತನ್ನ ಒಂದೂವರೆ ಚೀಲದ ಲಾಟ್‌ನ ಸುತ್ತ ಬಿದ್ದಿರುವ ಕಾಯಿ ಆರಿಸಿ ಜಿಲೇಬಿ ಕೊಂಡ. ಒಂದು ಗಾಲಿ ಬಾಯಿಗಿಟ್ಟುಕೊಂಡು, ಉಳಿದವುಗಳನ್ನು ಅಬ್ರೇಕಿನ ಹಾಳೆಯಲ್ಲಿ ಸುತ್ತಿ ಟವೇಲಿಗೆ ಹಾಕಿ ಗಂಟು ಕಟ್ಟಿದ. ಅವ್ವ ಜಿಲೇಬಿ ತರಬೇಕೆಂದು ಹೇಳಿಕಳಿಸಿದ್ದಳು. 'ಜುಲಾಬಿ...' ಅಂತ ಹೇಳುವಾಗ ಆಕೆಯ ಬಾಯಿಯ ಕಟಿಯಿಂದ ಜೊಲ್ಲು ಸುರಿದು ಕೆಳಗೆ ಬಿದ್ದಿತ್ತು. ಅವ್ವನಿಗೆ ನಾಳೆ ಜಿಲೇಬಿ ತಿನ್ನಿಸಬೇಕು ಎಂದು ನೆನಪುಮಾಡಿಕೊಳ್ಳುತ್ತ ದುಬ್ಬೀರ ನಿದ್ದೆಗೆ ಜಾರಿದ.

ಸಿಗಬೇಕಾದ ಧಾರಣೆ ಸಿಗದಿದ್ದಾಗ ಸಹಜವಾಗಿ ರೆಫ್ಯೂಜ್ ಮಾಡಿಸಬೇಕಾಗುತ್ತಿತ್ತು. ಯಾವುದೋ ಒಂದು ಸಣ್ಣ ಲಾಟ್‌ಗೆ ದೊಡ್ಡ ರೇಟು ನೀಡಲಾಗುತ್ತಿತ್ತು. ಅದೇ ಅವತ್ತಿನ ಮಾರುಕಟ್ಟೆ ಧಾರಣೆಯಾಗಿ ರೇಡಿಯೋದ ಕೃಷಿರಂಗದಲ್ಲಿ ಕೇಳಿ ಬರುತ್ತಿತ್ತು. 'ಕರಿ ಎತ್ತು ಕಾಳಿಂಗ... ಬಿಳಿ ಎತ್ತ ಮಾಲಿಂಗ...' ಎಂದು ರೇಡಿಯೋ ಹಾಡುತ್ತಿತ್ತು. ಅದನ್ನೇ ನಂಬಿ ಲೋಡುಗಳು ವಖಾರವನ್ನು ಬಂದು ಸೇರುತ್ತಿದ್ದವು.

ವಖಾರಕ್ಕೆ ಮಾಲು ಜಾಸ್ತಿ ಬಂದಾಗ ಆವಕ ಜಾಸ್ತಿಯಾಗಿ ಎಲ್ಲ ಟೆಂಡರ್‌ದಾರರು ಬೇಕಾದಂತೆ ರೇಟ್ ಹಾಕುತ್ತಿದ್ದರು. ದೊಡ್ಡ ರೈತರ ದೊಡ್ಡ ಲಾಟುಗಳಿಗೆ ಒಳ್ಳೆಯ ರೇಟು. ಸಣ್ಣ ಲಾಟುಗಳಿಗೆ ಕಡಿಮೆ ರೇಟು. ಹೀಗೆ ವಂಚನೆಯೊಂದು ಎಷ್ಟೋ ಕಾಲದಿಂದ ಜಾರಿಯಲ್ಲಿತ್ತು. ಒಂದು ರೀತಿ ದೊಡ್ಡ ರೈತರಿಗೂ, ದಲ್ಲಾಳಿಗಳಿಗೂ ಒಳಒಪ್ಪಂದವಿದ್ದಂತಿತ್ತು. ಅಲ್ಲದೇ ಆಯಾ ಊರುಗಳ ಸಣ್ಣ ರೈತರನ್ನು ದಲ್ಲಾಳಿ ಅಂಗಡಿಗಳಿಗೆ ಗಿರಾಕಿಗಳನ್ನಾಗಿಸುತ್ತಿದ್ದದ್ದು ದೊಡ್ಡ ಜಮೀನ್ದಾರರೇ. ಮುಂಗಾರು ಹಂಗಾಮಿಗೆ ಬೀಜಕ್ಕೆ, ಗೊಬ್ಬರಕ್ಕೆ ಅಂತಾ ಪುಡಿಗಾಸನ್ನು ದಲ್ಲಾಳಿಗಳಿಂದ ಸಣ್ಣ ರೈತರಿಗೆ ಆಯಾ ಊರಿನ ದೊಡ್ಡ ರೈತರು ಮುಂಗಡ ಕೊಡಿಸುತ್ತಿದ್ದರು. ಅದಕ್ಕೆ ಬಡ್ಡಿ ಚಕ್ರಬಡ್ಡಿ ತೆರಬೇಕಾಗಿತ್ತಾದರೂ ಬಿತ್ತುವ ಹಂಗಾಮಕ್ಕೆ ನೆರವಾಯಿತು ಎಂಬ ಕಾರಣಕ್ಕಾಗಿ ಜೀವನಪೂರ್ತಿ ಉಪಕಾರ ಸ್ಮರಣೆಯ ಭಾರದಿಂದ ನೊಗಕ್ಕೆ ಕತ್ತೊಡ್ಡಿದ ಮೂಕ ಎತ್ತುಗಳಂತೆ ಸಣ್ಣ ರೈತರು ಇರಬೇಕಾಗುತ್ತಿತ್ತು.

ಈ ಅಂಗಡಿಗೆ ಪುಣಾ, ಹೈದ್ರಾಬಾದ್‌ಗಳಿಂದ ಟೆಂಡರ್‌ದಾರರು ಬರುವುದರಿಂದ ಚೊಲೊ ಧಾರಣೆ ಸಿಗುತ್ತದೆ ಎಂದು ಸಣ್ಣ ರೈತರನ್ನು ನಂಬಿಸಲಾಗುತ್ತಿತ್ತು. ಉಳಿದ ಕಡೆಗೂ ದೊಡ್ಡ ರೈತರು ಇಂತಹದ್ದೇ ಮಾತುಗಳನ್ನು ಹೇಳುತ್ತಿದ್ದರು. ಆದರೆ ಎಲ್ಲ ಗೊತ್ತಿದ್ದೂ ಏನೂ ಮಾಡಲಾಗದ ಸ್ಥಿತಿಯಿಂದ ಸಣ್ಣ ರೈತರು ದಲ್ಲಾಳಿಗಳ ಪಾಲಾಗಬೇಕಿತ್ತು. ಆ ಅಂಗಡಿಯಲ್ಲಿ ಎಷ್ಟು ರೇಟು ಬಂತು? ಈ ಅಂಗಡಿಯಲ್ಲಿ ಎಷ್ಟು? ಹೀಗೆ ಚರ್ಚೆ ಮಾಡಿ 'ನಂದು ಚೊಲೊ, ನಿಂದು ಪಾಡ...' ಎಂದು ಅಸಮಾಧಾನದೊಳಗೇ ಒಂದು ಸಮಾಧಾನವನ್ನು ಹುಡುಕಿಕೊಳ್ಳುತ್ತಿದ್ದರು. ಕ್ವಿಂಟಾಲ್‌ಗೆ ನೂರು, ಐವತ್ತು ರೂಪಾಯಿಗಳ ಫರ್ಕು ಒಂದು ದೊಡ್ಡ ಧಾರಣೆಯಂತೆ ಅವರಿಗೆ ತೋರುತ್ತಿತ್ತು. ಒಮ್ಮೆ ಧಾರಣೆ ಹೆಚ್ಚು ಬಂದ ಅಂಗಡಿಗೆ ಮಾಲು ಹೊಡೆಯಲು ಹೋಗಿ ದುಬ್ಬೀರ ತನ್ನದೇ ಊರಿನವರ ಚಾಡಿಯಿಂದ ಸಿಕ್ಕುಬಿದ್ದು ಅಪಮಾನಕ್ಕೆ ಈಡಾಗಿದ್ದ. ಹೀಗೆ ಅವನಂತೆ ಹಲವರು ಇದ್ದರು. ವಖಾರದ ಅಂಗಡಿಯೊಳಗಿನ ಬಿಳಿ, ಮೆತ್ತನೆಯ ದಿಂಬು ತೆಕ್ಕೆಗಳು